# ಅರುಂಧತಿ ನಕ್ಷತ್ರ ದರ್ಶನ ಎಂಬ ಪಾಠ



**ವಧುವರರಿಗೆ ತೋರಿಸುವ ಅರುಂಧತಿ ನಕ್ಷತ್ರ ದರ್ಶನದಲ್ಲಿ ದಾಂಪತ್ಯದ ಮಾದರಿಯ ಜೊತೆಗೆ 'ಜೀವನ ಕಲೆ'ಯ ಪಾಠವೂ ಇದೆ. ಕಾಣುವ ಕಣ್ಣು ಬೇಕಷ್ಟೆ.**

■ ಸ್ವಯಂಪ್ರಭಾ

ಎಳೆಯರಿಗೆ ಪಾಠ ಹೇಗಿರಬೇಕು ಎಂದು ಯೋಚಿಸುವಾಗ 'ಅರುಂಧತಿ ನಕ್ಷತ್ರ ದರ್ಶನ'ದ ಕತೆ ನೆನಪಾಗುತ್ತದೆ. ವಿವಾಹ ನಡೆದ ನಂತರ, ವಧೂ ವರರಿಗೆ ಅರುಂಧತಿ ನಕ್ಷತ್ರವನ್ನು ತೋರಿಸುವುದು ವಿವಾಹ ಕಾರ್ಯಕ್ರಮದ ಒಂದು ಭಾಗ. ಇತ್ತೀಚೆಗೆ ಈ ನಕ್ಷತ್ರ ತೋರಿಸುವ ಶಾಸ್ತ್ರವನ್ನು ಹಗಲಿನಲ್ಲಿಯೇ ಮುಗಿಸಿಬಿಡುವ ಧಾವಂತ ಸೃಷ್ಟಿಯಾಗಿದೆ. ಹಿಂದಿನ ಕಾಲದಲ್ಲಿ ಮದುವೆಯ ಬಳಿಕ ದಂಪತಿಗಳು , ಅರುಂಧತಿ ನಕ್ಷತ್ರ ದರ್ಶನವನ್ನು ರಾತ್ರಿಯೇ ಮಾಡುತ್ತಿದ್ದರು. ವಸಿಷ್ಠ ಮಹರ್ಷಿ ಮತ್ತು ಅರುಂಧತಿ ದೇವಿಯರು 'ಆದಿದಂಪತಿಗಳು' ಎಂಬ ಹಿರಿಮೆ ಪಡೆದವರು. ಆದ್ದರಿಂದಲೇ ಅವರನ್ನು ದರ್ಶನ ಮಾಡಿ, ಆಶೀರ್ವಾದ ಪಡೆದರೆ, ದಾಂಪತ್ಯದಲ್ಲಿ ಸುಖ–ಹೊಂದಾಣಿಕೆ ಹೆಚ್ಚುತ್ತದೆ ಎನ್ನುವ ನಂಬಿಕೆಯಿದೆ.

ರಾತ್ರಿ ವೇಳೆಯಲ್ಲಿ ಅರುಂಧತಿ ದರ್ಶನ ಪ್ರಕ್ರಿಯೆ ಸುಂದರವಾಗಿರುತ್ತದೆ. ಮುಸ್ಸಂಜೆ ಮುಗಿದು ರಾತ್ರಿ ಕವಿಯುತ್ತಿದ್ದಂತೆಯೇ ನೂತನ ದಂಪತಿ ಮತ್ತು ಹಿರಿಯರು ಅಂಗಳದಲ್ಲಿ ಸೇರುತ್ತಾರೆ. ರಾತ್ರಿ ಕವಿಯುತ್ತಿದ್ದಂತೆಯೇ ಸಪ್ತ ಋಷಿ ಮಂಡಲವು ನೆತ್ತಿಯತ್ತ ಸರಿಯುತ್ತದೆ. ಏಳು ಮಂದಿ ಋಷಿಗಳ ಪೈಕಿ ಆರು ಮಂದಿ ಋಷಿಗಳ ಪತ್ನಿಯರು, ಪಕ್ಕದಲ್ಲೇ ಇರುವ ಸಣ್ಣದಾದ ನಕ್ಷತ್ರ ಮಂಡಲದಲ್ಲಿ ಗೋಚರಿಸುತ್ತಾರೆ. ಆದರೆ ಅರುಂಧತಿ ದೇವಿಗೆ ಮಾತ್ರ ಪತಿಯ ಸಮೀಪವೇ ಇರುವ ಭಾಗ್ಯ. ಹಾಗಾಗಿ ಋಷಿಮಂಡಲದಲ್ಲಿ ವಸಿಷ್ಠರನ್ನು ಸಂಕೇತಿಸುವ ನಕ್ಷತ್ರದ ಪಕ್ಕವೇ ಅರುಂಧತಿ ನಕ್ಷತ್ರವನ್ನು ಕಾಣಬಹುದು. ಇದೊಂದು ಪುಟ್ಟ ನಕ್ಷತ್ರವಾದ್ದರಿಂದ ಸೂಕ್ಷ್ಮದೃಷ್ಟಿಯನ್ನು ಆಕಾಶಕ್ಕೆ ನೆಟ್ಟು ದೊಡ್ಡ ನಕ್ಷತ್ರದ ಬಳಿಯೇ ಇರುವ ಸಣ್ಣ ನಕ್ಷತ್ರವನ್ನು ಗುರುತಿಸುವಂತೆ ಪುರೋಹಿತರು ಅಥವಾ ಮನೆಯ ಹಿರಿಯರು ವಧೂವರರಿಗೆ ಹೇಳಿಕೊಡುತ್ತಾರೆ. ಆಕಾಶ ಸ್ವಚ್ಛವಾಗಿದ್ದರೆ ಸರಿ, ಇಲ್ಲವಾದರೆ, ಸ್ವಚ್ಛ ಆಕಾಶ ಕಾಣಿಸುವ ದಿನದಂದು ಈ ನಕ್ಷತ್ರ ನೋಡುವ ಪರಿಪಾಠವಿದೆ.

'ಪಾಠ' ಎನ್ನುವುದು ಹೀಗೆಯೇ ಇರುತ್ತದೆ. ಮೊದಲು ವಿಶಾಲವಾದ ಆಕಾಶವನ್ನು ನೋಡಲು ಕಣ್ಣುಗಳನ್ನು ಹೊಂದಿಸಿಕೊಳ್ಳಬೇಕು. ಆ ಸೌಂದರ್ಯವನ್ನು ಗ್ರಹಿಸುವ ಸಾಮರ್ಥ್ಯ ಪಡೆದುಕೊಂಡ ಮೇಲೆ ನಕ್ಷತ್ರಗಳ ಮಹಾನ್ ರಾಶಿಯಲ್ಲಿ ನಕ್ಷತ್ರ ಮಂಡಲಗಳನ್ನು ಗುರುತಿಸಬೇಕು. ಆ ಮಂಡಲಗಳಲ್ಲಿ ಸಪ್ತ ಋಷಿ ಮಂಡಲದ ನಕ್ಷತ್ರವನ್ನು ಒಂದೊಂದಾಗಿ ಪತ್ತೆ ಮಾಡಿ ಅವುಗಳನ್ನು ಗಾಳಿಪಟದ ಆಕಾರದಲ್ಲಿ ಜೋಡಿಸುತ್ತ ಸಾಗಬೇಕು. ನಾಲ್ಕು ನಕ್ಷತ್ರಗಳು ಚೌಕಾಕಾರದಲ್ಲಿ ಹಾಗೂ ಮೂರು ನಕ್ಷತ್ರಗಳು ಸಾಲಾಗಿ ಇರುವುದನ್ನು ಗುರುತಿಸಿದ ಬಳಿಕ ಎರಡು ಜೋಡಿ ನಕ್ಷತ್ರಗಳು ಎಲ್ಲಿವೆ ಎಂದು ಕಣ್ಣಲ್ಲಿ ಕಣ್ಣು ನೆಟ್ಟು, ಹುಡುಕುವುದಕ್ಕೆ ಶುರು ಮಾಡಬೇಕು. ಕೊನೆಗೂ ಪುಟ್ಟ ನಕ್ಷತ್ರವನ್ನು ಗುರುತುಹಿಡಿಯುವುದು ಸಾಧ್ಯವಾಗುತ್ತದೆ. ಅದನ್ನು ನೋಡಿದ ದಂಪತಿಗಳ ಕಣ್ಣಲ್ಲಿ ಸಂತಸ.

ದೊಡ್ಡದರ ಗುರುತು ಹೇಳುತ್ತಾ ಹೇಳುತ್ತಾ ಅವರ ದೃಷ್ಟಿಕೋನವನ್ನು ಸೂಕ್ಷ್ಮಗೊಳಿಸುತ್ತಾ ಸಾಗುವುದು ಪಾಠದ ಒಂದು ಮಾದರಿ. ಇದು ಹೊಸ ಪರಿಕಲ್ಪನೆಗಳು ಹಾಗೂ ಹೊಸ ವಿಚಾರಗಳ ಪಾಠ ಹೇಳುವ ಉತ್ತಮ ಮಾದರಿಯೂ ಹೌದು. ತರಗತಿಗಳೂ ಒಂದರ್ಥದಲ್ಲಿ ಆಕಾಶದಲ್ಲಿನ ನಕ್ಷತ್ರಗಳ ಹುಡುಕಾಟದ ತಾಲೀಮಿನಂತೆಯೇ ಇರುತ್ತವೆ. ವಿಶಾಲವಾದ ಶಾಲೆ ಅಥವಾ ಕಾಲೇಜು, ಅದರಲ್ಲಿ ತಮ್ಮ ತರಗತಿಗಳು, ಅಲ್ಲಿಯ ಪ್ರಶಾಂತ ವಾತಾವರಣ ಸೃಷ್ಟಿಯಾದ ಬಳಿಕವಷ್ಟೇ ಪಾಠಗಳು ಶುರು. ಅದರಲ್ಲಿಯೂ ಇಷ್ಟವಾಗುವ ಪಾಠಗಳಿಗಾಗಿ ಕಾಯಬೇಕು. ಇಷ್ಟವಾಗುವ ವಿಚಾರಗಳಿಗಾಗಿ, ತಮ್ಮ ಆಯ್ಕೆಯ ವಿಚಾರಗಳಿಗಾಗಿ ಕಾದು, ಕೊನೆಗೆ ತಮಗೆ ಬೇಕಾದ ಜ್ಞಾನಾಮೃತವನ್ನು ಕುಡಿಯಬೇಕು. ಇದು ದೊಡ್ಡವರಿಗೂ ಅನ್ವಯವಾಗುವ ವಿಷಯವಾದ್ದರಿಂದ ಸಾರ್ವಕಾಲಿಕ ಎಂದರೂ ಸರಿ.

ಬಹಿರ್ಮುಖ ಕಲಿಕೆಯು ವಿಶಾಲವಾಗಿದ್ದಷ್ಟೂ ಅಂತರ್ಮುಖ ಕಲಿಕೆಯು ಆಳವಾಗಿ ಸಾಗಬಲ್ಲುದು ಎಂಬುದು ಹಿರಿಯರ ಮಾತು. ಆದರೆ ಕೊರೊನಾ ಸೋಂಕು ಈ ಬಹಿರ್ಮುಖ ಕಲಿಕೆಯನ್ನು ಸಂಕುಚಿತಗೊಳಿಸಿದೆ. ನಮ್ಮ ಬಳಿ ಕಲಿಕೆಗೆ ಇರುವುದು 'ತರಗತಿ' ಎಂಬ ಒಂದೇ ವಿಧಾನ. ಹಾಗಾಗಿ ಶಾಲೆಗೆ ಹೋಗದ ಮಕ್ಕಳು, ಮನೆಯಲ್ಲಿ ಏನೂ ತೋಚದಂತೆ ಕುಳಿತಿದ್ದಾರೆ. ಅವರನ್ನು ಸಂಭಾಳಿಸುತ್ತ ಅಮ್ಮಂದಿರು ಹೈರಾಣಾಗಿದ್ದಾರೆ. ಆನ್‌ಲೈನ್ ತರಗತಿ ಎನ್ನುವ ಒಂದೇ ಪರಿಕಲ್ಪನೆಗೆ ಜೋತು ಬಿದ್ದ ಹಿರಿಯರು ಮಕ್ಕಳ ಬಹಿರ್ಮುಖ ಕಲಿಕೆಯನ್ನು ಮೊಟಕುಗೊಳಿಸಿದ್ದಾರೆ.

ಕಲಿಕೆಯ ಹೊಸ ಮಾದರಿಗಳನ್ನು ಕಂಡುಕೊಳ್ಳಲು ಇದು ಸುಸಮಯ. ಪರ್ಯಾಯ ಶಿಕ್ಷಣ ವ್ಯವಸ್ಥೆಯನ್ನು ಪ್ರಾಯೋಗಿಕವಾಗಿ ಮಾಡಿದ ಎಷ್ಟೋಂದು ಉದಾಹರಣೆಗಳು ಜಗತ್ತಿನ ವಿವಿಧೆಡೆಗಳಲ್ಲಿ ಇವೆ. ಅವುಗಳನ್ನು ಗಮನಿಸುತ್ತ ಹೊಸ ರೂಪವನ್ನು ಸೃಷ್ಟಿಸಲು ಇಂದು ಪ್ರಯತ್ನಿಸಬೇಕಾಗಿದೆ. ಬದಲಾಗಿ, ಈಗಲೂ ಪುಟಾಣಿ ಮಕ್ಕಳಿಗೆ, 'ಮೀನುಗಳ ಐದು ಚಿತ್ರಗಳ ಪ್ರಿಂಟ್ ತೆಗೆದು ಅದನ್ನು ಪ್ರೊಜೆಕ್ಟ್ ಪುಸ್ತಕದಲ್ಲಿ ಅಂಟಿಸಿ', ಫೋಟೋ ತೆಗೆದು ಶಾಲೆಯ ವೆಬ್‌ಸೈಟ್‌ಗೆ ಅಪ್ ಲೋಡ್ ಮಾಡಿ' ಎಂಬುದಾಗಿ ನೀಡುವ ಸೂಚನೆಯಲ್ಲಿ ಹೆಚ್ಚಿನ ಕಲಿಕೆ ಕಾಣಿಸುವುದಿಲ್ಲ. ಈ ಬಿಡುವಿನ ದಿನಗಳಲ್ಲಿ ಮೀನು ಹಿಡಿಯುವ ಹುಮ್ಮಸ್ಸಿನಲ್ಲಿರುವ ಮಕ್ಕಳಿಗೆ ಈ ಪ್ರೊಜೆಕ್ಟ್ ಎಷ್ಟು ಅಸಂಬದ್ಧವಾಗಿ ಗೋಚರಿಸಬಹುದು! ಶಾಲೆಯಿಂದಲೇ ಅಥವಾ ಮನೆಯಿಂದಲೇ ತರಗತಿಯನ್ನು ನಿರ್ವಹಣೆ ಮಾಡುವ ಶಿಕ್ಷಕರಿಗೆ ಹೊಸ ಮಾದರಿಗಳ ಅನ್ವೇಷಣೆಗೆ ಪ್ರೋತ್ಸಾಹ ನೀಡಬೇಕಾಗಿದೆ. ಪೋಷಕರೂ ಈ ಪ್ರಯತ್ನದಲ್ಲಿ ಕೈ ಜೋಡಿಸಬೇಕಾಗಿದೆ. ■